

**ತರಾಸು ಬರೆದ ಒಂದೊಂದು ಹಾಳೆಯೂ ಯಾವುದೋ ಶಾಸನ ಇದ್ದಹಾಗೆ. ಮೈಸೂರಿನಲ್ಲಿ ತರಾಸು ಅಕ್ಷರಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದ ಕಂಪಾಸಿಟರುಗಳು ಇಬ್ಬರೋ ಮೂವರೋ!**

ಮಾರಾಟವಾಗುತ್ತ ಇದ್ದವು. ಪಠ್ಯಪುಸ್ತಕಗಳೂ ಸಾಕಷ್ಟು ಸಂಖ್ಯೆಯಲ್ಲಿ ಆಗುತ್ತ ಇದ್ದವು.

ಅಷ್ಟಿದ್ದರೂ ತರಾಸು ಅವರಿಗೆ ಯಾವಾಗಲೂ ತಾಪತ್ರಯ.

ನಮ್ಮ ಬರಹಗಾರರಲ್ಲಿಯೇ ತರಾಸು ವಿಶಿಷ್ಟ ಶಕ್ತಿಯುಳ್ಳವರು. ಮಹಾ ಪ್ರತಿಭಾವಂತ ಆದರೆ ಪಟ್ಟಾಗಿ ಕುಳಿತುಕೊಳ್ಳುವುದು ಮಾತ್ರ ಅವರ ಜಾಯಮಾನಕ್ಕೆ ಒಗ್ಗಿರಲಿಲ್ಲ. ಅವರಿಗೆ ತಿರುಗುಕಾಲು. ಊರಲ್ಲಿ ಅಡ್ಡಾಡಿಕೊಂಡೇ ಇರಬೇಕು. ಅಂಥ ಸ್ವಭಾವ.

ನಾಗರಹಾವು, ಎರಡು ಹೆಣ್ಣು ಒಂದು ಗಂಡು, ಸರ್ಪಮತ್ಸರ ಹೀಗೆ ಅವರ ಅನೇಕ ಕಾದಂಬರಿಗಳನ್ನು ನಾನು ಅಚ್ಚು ಮಾಡಿದ್ದೇನೆ.

ಇಷ್ಟೇ ಅಲ್ಲ. ನಾನು ಶಕ್ತಿ ಪ್ರೆಸ್ ಬಿಟ್ಟ ಮೇಲೆ ಪುಸ್ತಕದ ಮಾರಾಟದಿಂದಲೇ ಜೀವನ ಸಾಗಿಸುತ್ತ ಇದ್ದಾಗ ಅವರದು ಕಾಕಲಿಪಿ ಎಂದು ಕಂಪಾಸಿಟರನಿಗೆ ಅರ್ಥವಾಗುವುದಿಲ್ಲವೆಂದು ಒಂದಿಬ್ಬರು ಪ್ರಕಾಶಕರಿಗೆ ಅವರ ಹಸ್ತಪ್ರತಿಗಳನ್ನೂ ಪ್ರತಿ ಮಾಡಿಕೊಟ್ಟಿದ್ದೇನೆ.

ವಾಸ್ತವವಾಗಿಯೂ ತರಾಸು ಅವರದು ಕಾಕಲಿಪಿಯೇ. ಒಂದು ಚುಕ್ಕೆ ಹಾಕಿದರೆ ಅದೇ ಸ ಅದೇ ನ. ಈ ರೀತಿ, ಒಂದು ಪ್ಯಾರಾಕ್ಕೂ ಮತ್ತೊಂದು ಪ್ಯಾರಾಕ್ಕೂ ಕೂದಲೆಳೆಯ ಜಾಗವೂ ಇಲ್ಲ.

ಅವರು ಬರೆದ ಒಂದು ಹಾಳೆಯನ್ನು ಎತ್ತಿಹಿಡಿದರೆ ಯಾವುದೋ ಶಾಸನ ಇದ್ದಹಾಗೆ. ತರಾಸು ಬರವಣಿಗೆ ಎಲ್ಲ ಕಂಪಾಸಿಟರನಿಗೆ ಅರ್ಥವಾಗುವಂಥದ್ದೂ ಅಲ್ಲ. ಕೆಲವೇ ಕೆಲವು ಜನ ಸಮರ್ಥರು ಓದಿಕೊಂಡು ಕಂಪೋಸ್ ಮಾಡಬೇಕು, ಮಾಡಬಲ್ಲರು. ಮೈಸೂರಿನಲ್ಲಿ ತರಾಸು ಅಕ್ಷರಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದ ಕಂಪಾಸಿಟರುಗಳು ಇಬ್ಬರೋ ಮೂವರೋ!

ಇನ್ನು ಅವರ ಫುಲ್‌ಸ್ಕೇಪ್ ಒಂದು ಹಾಳೆ ಕಂಪೋಸ್ ಮಾಡಿದರೆ, ಕ್ರೌನ್ ಅಷ್ಟದಳದ ಆಕಾರ ಎಂಟು ಪುಟಗಳು ಭರ್ತಿ ಆದೀತು. ಎರಡು ಹಾಳೆಗೆ ಒಂದು ಫಾರ್ಮು, ಎಂದರೆ ಹದಿನಾರು ಪುಟ. ಹಾಗೆ ಅವರ ಬರಹ.

ಎಲ್ಲಕ್ಕಿಂತ ಹೆಚ್ಚಿನದು ಅವರ 'ಶಿಲ್ಪಶ್ರೀ' ಕಾದಂಬರಿಯನ್ನು ನಾವು ಮುದ್ರಣ ಮಾಡಿದ್ದು. ಅದು ಒಂದು ನಿರ್ದಿಷ್ಟ ಅವಧಿಯೊಳಗೆ ಮುಗಿಬೇಕಿತ್ತು. ಕಾರಣ ಪಠ್ಯಪುಸ್ತಕ ಕಮಿಟಿಗೆ ಅದನ್ನು ಕಳಿಸಬೇಕಿತ್ತು.

ಇದರ ಪ್ರಕಾಶಕರು ಬೆಂಗಳೂರಿನಿಂದ ಬಂದು